ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ೨೯ನೇ ಮಾರ್ಚ್ ೧೯೮೩, ಚೈತ್ರ ೮, ೧೯೦೫ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತ್ತು.

ಉಪಾಧ್ಯಕ್ಷರು, (ಶ್ರೀ ವೀರಣ್ಣ) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ರಾಜ್ಯ ಸರ್ಕಾರ ನೌಕರರಿಗೆ ಬೆಂಗಳೂರು ನಗರದಲ್ಲಿ ಮನೆಗಳನ್ನು ಒದಗಿಸಿರುವ ಬಗ್ಗೆ.

೧೮೨. ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರ ನೌಕರರಿಗೆ ಬೆಂಗಳೂರು ನಗರದಲ್ಲಿ ಎಷ್ಟು ಮನೆಗಳನ್ನು ಸರಕಾರದವರು ಕಟ್ಟಿಸಿಕೊಟ್ಟಿದ್ದಾರೆ ?

ಆ) ರಾಜಾಜಿನಗರದ ೬ನೇ ಬ್ಲಾಕ್‌ನಲ್ಲಿರುವ ಸರಕಾರ ನೌಕರರ ವಸತಿಗಳ ಸಂಖ್ಯೆ ಎಷ್ಟು ?

ಇ) ರಾಜಾಜಿನಗರದಲ್ಲಿ ಸರ್ಕಾರಿ ನೌಕರರಿಗಾಗಿ ಕಟ್ಟಿಸಿರುವ ಮನೆಗಳು ದುರಸ್ತಿಯಾಗದೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಈ) ನಿವೃತ್ತಿಯಾದ ಸರಕಾರಿ ನೌಕರರ ನಿವೃತ್ತಿಯಾದೊಡನೆ ಮನೆ ಖಾಲಿ ಮಾಡಬೇಕೆಂದು ಸರಕಾರ ನಿಯಮವಿದೆಯೇ ?

ಉ) ರಾಜಾಜಿನಗರದ ರಾಜ್ಯ ಸರ್ಕಾರಿ ನೌಕರರ ವಸತಿಗಳನ್ನು ದುರಸ್ತಿ ಮಾಡಿ ಬೇರೆ ಅವಂಕೂಲಗಳನ್ನು ಅಂದರೆ ತಾಪನ ಸಂಚಾರ ಇತ್ಯಾದಿ (ಹೀಟಿಂಗ್ ಸರ್‌ಕ್ಯೂಟ್) ಕಲ್ಪಿಸಿ ಕೊಡಬೇಕೆಂದು ಆ ನೌಕರರು ಮನವಿ ಮಾಡಿಕೊಂಡಿರುವ ಬಗ್ಗೆ ಸರ್ಕಾರ ಪರಿಹಾರ ನೀಡುತ್ತದೆಯೇ ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಒಟ್ಟು ೧,೬೯೧ ಮನೆಗಳನ್ನು ಸರ್ಕಾರಿ ನೌಕರರಿಗಾಗಿ ಒದಗಿಸಿದೆ.

ಆ) ೨೧೬ ಮನೆಗಳು.

ಇ) ಇಲ್ಲ, ಆದರೂ ವಾರ್ಷಿಕ ದುರಸ್ತಿ ಕೆಲಸಗಳನ್ನು ಪ್ರತಿ ವರ್ಷವು ಮಾಡಲಾಗುತ್ತಿದೆ.

ಈ) ಹೌದು.

ಉ) ಮಾಡಿಕೆ ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು ಯಾವ ತೊಂದರೆಯೂ ಇಲ್ಲ. ತಾಪನ ಸಂಚಾರ (ಹೀಟಿಂಗ್ ಸರ್‌ಕ್ಯೂಟ್) ಒದಗಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರದಲ್ಲಿ ಸರ್ಕಾರೀ ನೌಕರರ ಕ್ವಾರ್ಟರ್ಸ್ ಇವೆ. ಅದೇ ರೀತಿ ಜೀವನ್‌ಭೀಮಾ ನಗರದಲ್ಲಿ ಕೂಡ ಇವೆ ಎಂದು ತಿಳಿದಿದೆ. ಅಲ್ಲಿ ಎಷ್ಟು ಮನೆಗಳಿವೆ ಮಂತ್ರಿ ಅವುಗಳನ್ನು ಹೇಗೆ ವಿತರಣೆ ಮಾಡುತ್ತೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಹೆಚ್ಚು ವಿವರಣೆ ಕೊಡುವುದು ಸೂಕ್ತವೆಂದು ಕಾಣುತ್ತದೆ. ವಸಂತನಗರದಲ್ಲಿ ಳಿಳಿ ಮನೆಗಳು, ಜಯಮಹಲ್‌ನಲ್ಲಿ ೩೭ ಮನೆಗಳು, ಜೀವನ್‌ಭೀಮಾ ನಗರದಲ್ಲಿ ೭೩೨ ಮನೆಗಳು, ಮತ್ತು ತುಂಬೇನಹಳ್ಳಿಯಲ್ಲಿ ೫೪ ಮನೆಗಳು ಇವೆ. ಇವುಗಳನ್ನು ಲೋಕೋಪಯೋಗಿ ಇಲಾಖೆಯವರು ವಿತರಣೆ ಮಾಡುತ್ತಾರೆ. ರಾಜಾಜಿನಗರದಲ್ಲಿರತಕ್ಕ ೨೧೬ ಮನೆಗಳನ್ನು ಮತ್ತು ವಿಲ್ಸನ್‌ಗಾರ್ಡನ್‌ನಲ್ಲಿರತಕ್ಕ ೩೬೦ ಮನೆಗಳನ್ನು ಡಿಪ್ಯೂಟಿ ಕಮೀಷನರ್ ಅವರು ವಿತರಣೆ ಮಾಡುತ್ತಾರೆ. ಸಿದ್ದಾಪುರದಲ್ಲಿರತಕ್ಕ ೬೦ ಮನೆಗಳನ್ನು ಡಿ.ಪಿ.ಎ.ಆರ್.ನವರು ವಿತರಣೆ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಜೀವನ್‌ಭೀಮಾ ನಗರದಲ್ಲಿರತಕ್ಕ ಮನೆಗಳನ್ನು ಮತ್ತು ರಾಜಾಜಿ ನಗರದಲ್ಲಿರತಕ್ಕ ಮನೆಗಳನ್ನು ಸರ್ಕಾರೀ ನೌಕರರಿಗೆ ಕೊಡುವಾಗ ಅನೇಕ ವಿಷಯಗಳಲ್ಲಿ ತಾರತಮ್ಯ ವಾಗಿದೆ. ಜೀವನ್‌ಭೀಮಾ ನಗರದಲ್ಲಿ ಹೆಚ್ಚು ಅನುಕೂಲ ಕಲ್ಪಿಸಿಕೊಟ್ಟಿದ್ದೀರಿ. ರಾಜಾಜಿನಗರದಲ್ಲಿರುವ ಕ್ವಾರ್ಟರ್ಸ್‌ಗೂ ಅದೇ ರೀತಿ ಅನುಕೂಲ ಕಲ್ಪಿಸಿಕೊಡಬೇಕೆಂದು ಅವುಗಳಲ್ಲಿರುವ ನಿವಾಸಿಗಳು ಕೇಳಿದ್ದಾರೆ ಅವರು ಲೈಟ್, ಓವರ್‌ಹೆಡ್ ಟ್ಯಾಂಕ್, ವಾಟರ್ ಮತ್ತು ಆಲ್ ಏಲಿಕ್ಟ್ರಿಕ್ ಹೋಂ ಮಾಡಬೇಕೆಂದು ಕೇಳಿದ್ದಾರೆ. ಇವೆಲ್ಲವನ್ನು ಪರಾಮರ್ಶೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೀರಿ. ಆದರೆ ಅದು ಕಾರ್ಯಗತವಾಗಿಲ್ಲ. ಅದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳತಕ್ಕದ್ದರಲ್ಲಿ ವಾಸ್ತವಾಂಶ ಇದೆ. ಅವರಿಗೆ ಏನೇನು ಸವಲತ್ತುಗಳನ್ನು ಕೊಡಬೇಕೆಂಬ ಬಗ್ಗೆ ಈಗಾಗಲೇ ಸರ್ಕಾರ ಆದೇಶ ಕೊಟ್ಟಿದ್ದರೂ ಕೆಲಸ ವಾಗಿಲ್ಲ ಎಂಬುದು ಗೊತ್ತಾಗಿದೆ. ನಾನು ಇಲಾಖಾಧಿಕಾರಿಗಳಿಗೆ ಸೂಚನೆ ನೀಡಿ ಆ ಕೆಲಸವನ್ನು ಮಾಡಿ ಸುವುದಕ್ಕೆ ಅತ್ಯಂತ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ರಾಜಾಜಿನಗರದ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿರತಕ್ಕ ಸರ್ಕಾರೀ ನೌಕರರಿಗೆ ಆಪರ ಸಂಬಳ ೮೧೦ ರೂಪಾಯಿ ಒಳಗಡೆ ಇರಬೇಕೆಂದು ಸೀಲಿಂಗ್ ಲಿಮಿಟ್ ಅನ್ನು ಗೊತ್ತು ಮಾಡಿದ್ದಿರಿ. ಅವರು ೮೧೦ ರೂಪಾಯಿ ಸಂಬಳವನ್ನು ಮುಟ್ಟಿದ ತಕ್ಷಣ ಕ್ವಾರ್ಟರ್ಸ್ ಬಿಡಬೇಕಾಗಿದೆ. ಆವರಿಗೆ ಬೇರೆ ಸ್ವಂತ ಮನೆಗಳು ಇರುವುದಿಲ್ಲ. ಆದರೆ ಅದೇ ಜೀವನ್‌ಭೀಮಾ ನಗರದಲ್ಲಿ ಆ ರೀತಿ ಇಲ್ಲ ತುಂಬೇನಹಳ್ಳಿಯಲ್ಲಿ ಕೂಡ ಆರ್ಡರ್ ಹೊರಡಿಸಿ ಸ್ವೇ ಮಾಡಲಾಗಿದೆ. ಮುಂದೆ ಆದೇಶ ಹೊರಡಿಸುವ ತನಕ ಮುಂದುವರಿಯಬಹುದೆಂದು ಕರ್ನಾಟಕ ಸರ್ಕಾರದ ಕಾರ್ಯಾಲಯದಿಂದ ೮ನೇ ಏಪ್ರಿಲ್ ೧೯೬೨ ರಲ್ಲಿ ಆಜ್ಞೆ ಮಾಡಿದ್ದಾರೆ. ಆದ್ದರಿಂದ ಈ ಸೀಲಿಂಗ್ ಲಿಮಿಟ್ ಅನ್ನು ಬೇರೆ ಕಡೆ ತೆಗೆದುಹಾಕಿರುವ ಹಾಗೆ ಇಲ್ಲಿಯೂ ಕೂಡ ತೆಗೆದುಹಾಕುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ !

ಶ್ರೀ ಹೆಚ್.ಡಿ. ದೇವೇಗೌಡ.— ನನಗೆ ಇದು ಗೊತ್ತಿರಲಿಲ್ಲ, ಪರಿಶೀಲನೆ ಮಾಡುತ್ತೇನೆ. ತಾವು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ.

ಶ್ರೀ ಎಂ.ಎಸ್. ಕೃಷ್ಣನ್.—ಆರ್ಡರ್ ಇದೆ.

ಶ್ರೀ ಎಚ್.ಡಿ. ದೇವೇಗೌಡ.—ನಾನು ವಿವಾದಕ್ಕೆ ಇಳಿಯುವುದಿಲ್ಲ. ಕೆಲವು ಕಡೆ ಸೀಲಿಂಗ್ ಲಿಮಿಟ್ ಇಟ್ಟು, ಕೆಲವು ಕಡೆ ಇಡದೇ ಇರುವ ತಾರತಮ್ಯ ಏನಿದೆ ಅದರ ಬಗ್ಗೆ ಸರ್ಕಾರ ನಿರ್ವಿಕಾರ ಮನೋಭಾವನೆಯಿಂದ ಪುನರ್‌ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸೀಲಿಂಗ್ ಲಿಮಿಟ್ ಬಗ್ಗೆ ಪುನರ್‌ಪರಿಶೀಲನೆ ಮಾಡುವುದಕ್ಕೆ ಸಮಯ ಬೇಕಾಗಬಹುದು. ಸೀಲಿಂಗ್ ಲಿಮಿಟ್‌ಗೆ ಬಂದಿರುವುದರಿಂದ ನೀವು ಮನೆ ಬಿಡಬೇಕೆಂದು ಕೆಲವು ನೌಕರರಿಗೆ ನೋಟೀಸ್ ಕೊಟ್ಟಿದ್ದಾರೆ. ಈ ನೌಕರರಿಗೆ ಬೇರೆ ಮನೆ ಇಲ್ಲ. ಮುಂದೆ ಈ ಸೀಲಿಂಗ್ ಲಿಮಿಟ್ ವಿಷಯ ತೀರ್ಮಾನವಾಗುವವರೆಗೆ ನೋಟೀಸ್ ಕೊಡದ ಹಾಗೆ ಮತ್ತು ಕೊಟ್ಟಿರುವ ನೋಟೀಸನ್ನು ವಾಪಸ್ ತೆಗೆದುಕೊಳ್ಳುವಹಾಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಕೆಲವು ಮನೆಗಳನ್ನು ಲೋಕೋಪಯೋಗಿ ಇಲಾಖೆಯವರು ವಿತರಣೆ ಮಾಡುತ್ತಿದ್ದಾರೆ, ಕೆಲವು ಮನೆಗಳನ್ನು ಡಿ ಪಿ.ಎ.ಆರ್ ನವರು ಮಾಡುತ್ತಿದ್ದಾರೆ, ಇನ್ನೂ ಕೆಲವು ಮನೆಗಳನ್ನು ಜಿಲ್ಲಾಧಿಕಾರಿಗಳು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಕುಳಿತುಕೊಂಡು ವಿತರಣೆ ಮಾಡುತ್ತಿದ್ದಾರೆ. ತಾವು ಹೇಳಿದಂಥ ಲೋಪದೋಷಗಳ ಬಗ್ಗೆ ತಮ್ಮನ್ನೂ ಕರೆದು ಸಮಾಲೋಚನೆ ಮಾಡಿ ಎಲ್ಲೆಲ್ಲಿ ಆ ರೀತಿ ದೋಷಗಳಿವೆಯೆಂದು ತಾವು ಉಲ್ಲೇಖ ಮಾಡಿದ್ದೀರಿ ಅದಕ್ಕನುಗುಣವಾಗಿ ಪರಿಹಾರ ಕೊಡುತ್ತೇನೆ. ಇವತ್ತಂತ ಮಧ್ಯಾಹ್ನವೇ ಸಾಧ್ಯವಾದರೆ ಕರೆದು ತೀರ್ಮಾನ ಮಾಡುತ್ತೇನೆ. ದೋಷ ಇದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನೋಟೀಸ್‌ಗಳನ್ನು ಕೊಡದಹಾಗೆ ತಡೆಹಾಕಿ.

ಶ್ರೀ ಎಚ್.ಡಿ. ದೇವೇಗೌಡ.– ಪ್ರಶ್ನೋತ್ತರ ವೇಳೆ ಆದಮೇಲೆ ಇವತ್ತೇ ತಮ್ಮನ್ನು ಕರೆಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತೀರ್ಮಾನ ನಮ್ಮ ಪರವಾಗಿ ಮಾಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಮುಚ್ಚುಮರೆಯಿಲ್ಲದೆ ಹೇಳುತ್ತೇನೆ, ಏನಾದರೂ ಅನ್ಯಾಯವಾಗಿದ್ದರೆ ಸರಿಪಡಿಸುವುದರ ಬಗ್ಗೆ ಯೋಚನೆ ಮಾಡೋಣ. ಎಲ್ಲೆಲ್ಲಿ ಏನೇನು ಅನ್ಯಾಯವಾಗಿದೆ ಎಂಬುದು ನನಗೆ ಗೊತ್ತಿಲ್ಲ. ತಮ್ಮ ಹತ್ತಿರ ಕೆಲವು ಪ್ರಕರಣಗಳಿರುವುದರಿಂದ ಪ್ರಶ್ನೋತ್ತರ ಮುಗಿದ ಮೇಲೆ ಮೂರೂವರೆ ಗಂಟೆಗೆ ತಾವು ಬನ್ನಿ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸುತ್ತೇನೆ. ಇದರ ಬಗ್ಗೆ ಸಮಾಲೋಚನೆ ಮಾಡಿಸಿ ನಿರ್ಣಯ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ನಾರಾಯಣರಾವ್.— ಸಚಿವರು ಕೊಟ್ಟ ಆಂಕಿಅಂಶದಲ್ಲಿ ಪೋಲೀಸ್ ಕ್ವಾರ್ಟರ್ಸ್ ಸೇರಿದೆಯೇ ?

ಶ್ರೀ ಎಚ್.ಡಿ. ದೇವೇಗೌಡ.—ಅದು ಬರುವುದಿಲ್ಲ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಅಮ್ಮಣಗಿ ಗ್ರಾಮದ ಕೆರೆಯ ನಿರ್ವಾಣ ಕುರಿತಾಗಿ

೧೮೩. ಶ್ರೀ ಮಲ್ಲಾರಗೌಡ (ಸಂಕೇಶ್ವರ); ಲೋಕೋಪಯೋಗಿ ಮತ್ತು ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಬೈರಾಪುರ ಹಾಗೂ ಅಮ್ಮಣಗಿ ಗ್ರಾಮದ ಹತ್ತಿರ ಕೆರೆಯ ನಿರ್ವಾಣ ಕೆಲಸ ಪ್ರಾರಂಭವಾಗಿದೆಯೇ ?

ಆ) ಇವೆರಡೂ ಕೆಲಸಗಳಿಗೆ ತಗಲುವ ಹಣದ ಮೆಚ್ಚ ಎಷ್ಟು ?

ಇ) ಇದನ್ನು ಎಷ್ಟು ವರ್ಷಗಳಲ್ಲಿ ಮುಗಿಸಬಹುದು ?

ಈ) ರಾಶಂಗ್, ಅಂಕಲಿಬಾಡ, ಬೋರಗಲ್ಲ, ಮುಸರಗುವೆ, ಹರಗಾಪುರ ಹಾಗೂ ಇನ್ನುಳಿದ ಎಷ್ಟು ಕೆರೆಗಳಿಗೆ ಈಗಾಗಲೇ ಸರಕಾರದಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ಸಮೀಕ್ಷೆ ನಡೆಸಿ ಕೈಗೊಂಡ ಕ್ರಮಗಳೇನು ?

ಉ) ಅಂದಾಜು ಮತ್ತು ಯೋಜನೆ ಆಗಿ ಸರ್ಕಾರಕ್ಕೆ ಸಲ್ಲಿಸಿದ ವರದಿ ಸರ್ಕಾರದಿಂದ ಮಂಜೂರಾಗಲಿಕ್ಕೆ ತಡವಾಗುತ್ತಿರುವುದಕ್ಕೆ ಕಾರಣಗಳೇನು ?

ಊ) ಬರಗಾಲ ಪೀಡಿತ ಪ್ರದೇಶವಾದ ಹುಕ್ಕೇರಿ ತಾಲ್ಲೂಕಿನಲ್ಲಿ ಉಳಿದ ಕೆರೆಗಳಿಗೆ ಕೆಲಸ ಪ್ರಾರಂಭಿಸುವುದಕ್ಕಾಗಿ ಸರ್ಕಾರದಿಂದ ಆದ್ಯತೆಯ ಮೇರೆಗೆ ಮಂಜೂರಾತಿ ಕೊಡಲು ಕೈಗೊಂಡ ಕ್ರಮವೇನು ?